ಶ್ರೀ ಸಿದ್ದಯ್ಯಕಾಶೀಮಠ.—ಲಾರಿ ಮಾಲೀಕರುಗಳಿಗೆ ಪೋಲೀಸಿನವರಿಂದ ಕಿರುಕುಳವಾಗು ತ್ತಿಲ್ಲ ಎಂದು ಸರ್ಕಾರದವರು ಹೇಳಿದ್ದಾರೆ. ಇದಕ್ಕಾಗಿ ಒಂದು ಸ್ಪೆಷಲ್ ಸಿಬ್ಬಂದಿಯನ್ನು ನೇಮಕ ಮಾಡಿ ಆ ಲಾರಿ ಮಾಲೀಕರುಗಳಿಗೆ ಕಿರುಕುಳ ಕೊಡುವುದನ್ನು ತಪ್ಪಿಸಿ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಸ್ಪೆಷಲ್ ಸಿಬ್ಬಂದಿ ಇದೆ. ವಿಜಿಲೆನ್ಸ್ ಕಮೀಷನರು ಇದ್ದಾರೆ. ಡೈರೆಕ್ಟರ್ ಆಫ್ ಆಂಟಿ ಕರಪ್‌ಷನ್ ಇದ್ದಾರೆ. ಅವರ ಮೇಲ್ಪಟ್ಟು ಅಂಥಾ ಕೇಸುಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅದನ್ನು ನೋಡೋಣ.

ಶ್ರೀ ಡಿ. ಮುನಿಚಿನ್ನಪ್ಪ.—ಈ ತೆರಿಗೆಯನ್ನು ಸಾಧ್ಯವಾದ ಮಟ್ಟಿಗೆ ಸರ್ಕಾರದವರು ಕಡಿಮೆ ಮಾಡಿದರೆ ಒಳ್ಳೆಯದು. ಲಾರಿಗಳವರು ರಾಜ್ಯದಲ್ಲಿ ಎಲ್ಲೇ ಹೋದರೂ ಕೂಡ ಬಿಡುವುದಿಲ್ಲ. ಪೋಲೀಸಿನವರು ನುಮ್ಮನೆ ಲಾರಿಯನ್ನು ನಿಲ್ಲಿಸಿ ತೊಂದರೆ ಕೊಡುತ್ತಿದ್ದಾರೆ. ತಪ್ಪು ಮಾಡಿದವರನ್ನು ಶಿಕ್ಷಿಸಬೇಕಾದ್ದು ಸರ್ಕಾರದವರ ಕರ್ತವ್ಯ. ತಪ್ಪು ಇಲ್ಲದೆ ನುಮ್ಮನೆ ವ್ಯಥಾ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಇನ್ನು ಮೇಲಾದರೂ ಸರ್ಕಾರದವರು ತನಿಖೆ ನಡೆಸಿ ಅವರಿಗೆ ತೊಂದರೆ ಯಾಗದಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದು ಒಂದು ಸೂಚನೆ.

Drinking water wells in Tumkur District.

*Q.—307. Sri B. BYRAPPAJI (Turuvekere).—

Will the Government be pleased to state :—

(*a*) the number of villages that have drinking water wells in Tumkur District (Talukwise information may be furnished) ;

(*b* the number of villages that have no Drinking Water Wells in Tumkur District (Talukwise information may be furnished) ;

(*c*) how many wells are under execution at present ;

(*d*) whether there is any scheme to provide Drinking water wells to those villages which have no Drinking Water Wells within the Third Five Year Pian period ?

A.—Sri R. M. PATIL (Minister for Development, Panchayathi Raj and Municipal Administration).—

(*a*) and (*b*) *Vide* Statement appended.

(*c*) 450.

(*d*) It is proposed to provide Drinking Water Wells to all the villages that have no Drinking Water Wells under the Central L. D. Programme Scheme provided sufficient funds are released.

STATEMENT.

Sl. No.	Name of Taluk	No. of villages that have D.W. Wells in Tumkur District.	No. of villages that have no D. W. Wells in Tumkur District.
1	Tumkur ...	381	50
2	Gubbi ...	258	64
3	Kunigal ...	205	68
4	Tiptur ...	198	39
5	Turuvekere ...	254	22
6	C. N. Hally ...	257	60
7	Koratagere ...	212	31
8	Madhugiri ...	132	70
9	Sira ...	235	29
10	Pavagada ...	154	12
	Total ...	2,277	445

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲದೆ ಇರುವ ಗ್ರಾಮಗಳು 445 ಎಂದು ಹೇಳಿದ್ದೀರಿ. ಮತ್ತು ಈಗ ಹಾಲಿ ಕಾರ್ಯಗತ ವಾಗುತ್ತಿರುವ ಬಾವಿಗಳ ಸಂಖ್ಯೆ 450 ಎಂದು ಹೇಳಿದ್ದೀರಿ, ಕುಡಿಯುವ ನೀರಿನ ಬಾವಿಗಳು ಇಲ್ಲದೆ ಇರುವ ಗ್ರಾಮಗಳ ಸಂಖ್ಯೆ ಇನ್ನೂ ಹೆಚ್ಚಿಗೆ ಇರಬೇಕಾಗುತ್ತದೆ. ಆದ್ದರಿಂದ ಅದನ್ನು ಸರಿಯಾಗಿ ಹೇಳುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಸರ್ಕಾರದವರು ತನಿಖೆ ಮಾಡಿರುವ ಪ್ರಕಾರ ಇರತಕ್ಕದ್ದನ್ನು ನಾನು ಹೇಳಿದ್ದೇನೆ. ಒಂದು ವೇಳೆ ಹೆಚ್ಚು ಇದ್ದರೆ ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಆ ಪ್ರಕಾರ ತಿಳಿಸಬಹುದು.

ಶ್ರೀ ಎಸ್. ಗೋಪಾಲಗೌಡ.—1962ನೇ ಇಸವಿಯಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದವರು ಮೂರನೆ ಪಂಚವಾರ್ಷಿಕ ಯೋಜನೆಯು ಮುಗಿಯುವುದರೊಳಗೆ ದೇಶದಲ್ಲಿರ ತಕ್ಕ ಎಲ್ಲಾ ಹಳ್ಳಿಗಳವರಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುತ್ತೇವೆಂದು ಜನತೆಗೆ ಭರವಸೆಯನ್ನು ಕೊಟ್ಟಿದ್ದರಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಆ ಪ್ರಕಾರ ಮಾಡುತ್ತೇವೆಂದು ಹೇಳಿದ್ದೇವೆಯೇ ಹೊರತು ಅದನ್ನು ಮಾಡಿಯೇ ತೀರುತ್ತೇವೆಂದು ಹೇಳುವುದು ಆಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಯಲ್ಲಿ 445 ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲ ಎಂದು ಹೇಳಿದ್ದೀರಿ, ಹಾಗಾದರೆ 1966-67ನೇ ವರ್ಷ ಮುಗಿಯುವುದರೊಳಗೆ ಅಷ್ಟು ಹಳ್ಳಿಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿಕೊಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಬಾವಿಯನ್ನು ಕಟ್ಟಿಸಬೇಕಾದರೆ ಅನೇಕ ತೊಂದರೆಗಳಿವೆ. ಕೆಲವು ಕಡೆ ನೀರು ಬೀಳುತ್ತದೆ ಕೆಲವು ಕಡೆ ನೀರು ಬೀಳುವುದಿಲ್ಲ. ಕೆಲವು ಕಡೆ ಕಂಟ್ರಾಕ್ಟರುಗಳು ಕೆಲಸ ಮಾಡುತ್ತಾರೆ. ಕೆಲವು ಕಡೆ ಕೆಲಸ ಮಾಡುವುದಿಲ್ಲ. ಈ ರೀತಿಯ ತೊಂದರೆಗಳು ಇರುವುದ ರಿಂದ ಆ ಕೆಲಸ ನಿಧಾನವಾಗುತ್ತಿದೆಯೇ ಹೊರತು, ಅದನ್ನು ನಿಧಾನ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ತುಮಕೂರು ಜಿಲ್ಲೆಯಲ್ಲಿ 445 ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲ ಎಂದು ಹೇಳಿದ್ದೀರಿ, ಅಲ್ಲಿ ಬಾವಿಗಳನ್ನು ತೆಗೆಸಲು ಜನಗಳು ಮುಂದೆ ಬರಲಿಲ್ಲವೇ ಅಥವಾ ಇನ್ನು ಯಾವ ಕಾರಣಕ್ಕಾಗಿ ಆ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಲಿಲ್ಲ?

ಶ್ರೀ ಆರ್. ಎಂ. ಪಾಟೀಲ್.—ಹಾಗೆ ಪ್ರತ್ಯೇಕ ಪ್ರತ್ಯೇಕವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಅನೇಕ ತೊಂದರೆಗಳು ಇದ್ದದ್ದರಿಂದ ಆ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಈಗ ಕೆಲವು ಕಡೆ ಬಾವಿಗಳು ಅನೇಕ ವರ್ಷಗಳಿಂದಲೂ ಪೂರ್ತಿಯಾಗಿಲ್ಲ. ಆ ರೀತಿ ಅವು ಪೂರ್ತಿ ಆಗದೇ ಇರುವುದಕ್ಕೆ ಕಾರಣವೇನು? ಹಿಂದಿನ ರೇಟನ್ನೇ ಮುಂದುವರಿಸಿಕೊಂಡು ಹೋಗುತ್ತಿರುವುದರಿಂದ ಆ ಕೆಲಸಗಳನ್ನು ಮಾಡುವುದಕ್ಕೆ ಕಂಟ್ರಾಕ್ಟರುಗಳು ಮುಂದೆ ಬಾರದೇ ಇರುವ ಕಾರಣವೇ, ಹೇಗೆ? ಈ ಅವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ವಿಚಾರಿಸುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ವಾಮಿ, ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳು ಕುಡಿಯುವ ನೀರಿಲ್ಲದೆ ಬಹಳ ತೊಂದರೆಪಡುತ್ತಿದ್ದಾರೆ. ಇದು ಬಹಳ ಮುಖ್ಯವಾದದ್ದು. ಆದ್ದರಿಂದ ಈ ಬಾವಿಗಳ ಕೆಲಸವನ್ನು ಮಾಡಿಸುವುದಕ್ಕೆ ಕಂಟ್ರಾಕ್ಟರುಗಳು ಮುಂದೆ ಬಾರದೇ ಇದ್ದರೆ ಎನ್. ಇ. ಎಸ್. ಮುಖಾಂತರ ಸರ್ಕಾರದವರೇ ಆ ಕೆಲಸವನ್ನು ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—ಶ್ರೀಮಾನ್ ಕೇಶವಮೂರ್ತಿಗಳು ಹೇಳತಕ್ಕ ಮಾತು ಅಷ್ಟೊಂದು ಸಮಂಜಸವಾಗುವುದಿಲ್ಲ. ಯಾರಿಗೆ ನೀರಿನ ಅವಶ್ಯಕತೆ ಇದೆಯೋ ಅವರು ಮುಂದೆ ಬಂದು ಕೆಲಸವನ್ನು ಮಾಡಿಕೊಂಡು ತಮ್ಮ ಊರಿಗೆ ನೀರನ್ನು ತೆಗೆದುಕೊಂಡದ್ದಾಗಿದೆ. ಅದರಿಂದ ಸರ್ಕಾರಕ್ಕೂ ಕೀರ್ತಿ ಬರುತ್ತದೆ. ಮತ್ತು ಅವರಿಗೂ ಕಲ್ಯಾಣವಾಗುತ್ತದೆ. ಎಲ್ಲಾ ಕಡೆಗಳಲ್ಲೂ ಸರ್ಕಾರದವರೇ ತೆಗೆದುಕೊಂಡು ಮಾಡುವುದಾದರೆ ಜನಗಳು ಮಾಡುವುದಕ್ಕಿಂತ ಹೆಚ್ಚಿನ ಖರ್ಚು ಬರುತ್ತದೆ.

ಶ್ರೀ ಕೆ. ಲಕ್ಕಪ್ಪ.—ಹಿಂದೆ ಪಂಚಾಯಿತಿ ರಾಜ್ಯದ ಖಾತೆಯನ್ನು ಪಹಿಸಿಕೊಂಡಿದ್ದಂತಹ ಶ್ರೀಮಾನ್ ರಾಮಕೃಷ್ಣಹೆಗಡೆಯವರು ಮೂರನೇ ಪಂಚವಾರ್ಷಿಕ ಯೋಜನೆಯ ಅಂದ್ಯೊಳಗೆ ಎಲ್ಲಾ ಹಳ್ಳಿಗಳಿಗೂ ಕೂಡ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿ ಕೊಡುತ್ತೇವೆಂದು ಈ ಸಭೆಯಲ್ಲಿ ಭರವಸೆಯನ್ನು ಕೊಟ್ಟಿದ್ದರು, ಈಗ ಆ ಭರವಸೆಗೆ ಭಂಗವಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

1-30 P. M.

ಶ್ರೀ ಆರ್. ಎಂ. ಪಾಟೀಲ್.—ಸರಕಾರ ಕೆಲಸವನ್ನು ಬಂದು ಮಾಡುವುದಿಲ್ಲ. ಎಷ್ಟು ಸಾಧ್ಯವೋ ಅಷ್ಟು ಮಾಡಿದ್ದಾರೆ. 2277 ಬಾವಿಗಳಾಗಿವೆ. ಈಗ ಮತ್ತೆ 454 ಬಾವಿಗಳ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಮಾಡಿದ್ದೇವೆ. ಇದರ ಮೇಲೆ ಕೆಲಸ ಬಂದಾಗಿದೆ ಎಂದು ಹೇಳುವುದು ಅಷ್ಟು ಸಮಂಜಸವಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಎಲ್ಲ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿ ವ್ಯವಸ್ಥೆಯನ್ನು ಒದಗಿಸುತ್ತೇವೆ ಎಂದು ಹತ್ತಾರುಸಾರಿ ಈ ಶಾಸನ ಸಭೆಯಲ್ಲಿ ಮತ್ತು ಇತರ ಕಡೆಗಳಲ್ಲಿ ಹೇಳುತ್ತಿದ್ದರೂ ಇನ್ನೂ ನೀವು ಮಾಡಿರುವ ಯೋಜನೆಗಳೇ ಪೂರ್ತಿಯಾಗಿ ಆಗಲಿಲ್ಲ, ಜನ ಸಾಮಾನ್ಯರಿಗೆ ಉತ್ತಮವಾದ ಕುಡಿಯುವ ನೀರನ್ನೆ ಒದಗಿಸದೇ ಹೋದರೆ ಜನಕ್ಕೆ ನೀವೇನು ಮಾಡಿದ ಹಾಗಾಯಿತು?

(No answer)

Sri N. O. SAMAJI (Marathi).—

ಶ್ರೀ ಆರ್. ಎಂ. ಪಾಟೀಲ್.—ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಬಾವಿಯನ್ನು ಕೊಡಬೇಕೆನ್ನುವುದೇ ಸರಕಾರದ ಉದ್ದೇಶ. ಅದರೆ ಮಾಡಿಲ್ಲ ಎಂದರೆ ಯಾವ ಹಳ್ಳಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು ಅಲ್ಲಿನ ಜನ ಸಾಕಷ್ಟು ಸಹಕಾರ ಕೊಟ್ಟು ಮುಂದೆ ಬರದೇ ಹೋದರೆ ಜನತೆಗೆ ಬಾವಿ ಬೇಕಾಗಿಲ್ಲ ಎಂದು ಹೇಳಿದರೂ ತಪ್ಪಾಗುವುದಿಲ್ಲ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ಮಲೆನಾಡು ಪ್ರದೇಶದಲ್ಲಿ ಗುಡ್ಡ ಗಾಡುಗಳು ಹೆಚ್ಚಾಗಿರುವುದರಿಂದ ಇಲ್ಲಿ ಬಾವಿಗಳನ್ನು ಮಾಡಲು ಕಂಟ್ರಾಕ್ಟರುಗಳೇ ಅಂದಾಜುಗಳ ಪ್ರಕಾರ ಮಾಡಲು ಮುಂದೆ ಬರುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ವಿಚಾರಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಬಾವಿಗಳನ್ನು ತೆಗೆದುಕೊಳ್ಳುವಾಗ ಗ್ರಾಮಸ್ಥರು ಕಾಂಟ್ರಿಬ್ಯೂಷನ್ನು ನಾಲ್ಕನೆ ಒಂದು ಭಾಗದಷ್ಟು ಕೊಡಬೇಕೆಂದು ಇದೆ. ಇದನ್ನು ಜಿಲ್ಲಾಧಿಕಾರಿಗಳ ಡಿಸ್‌ಕ್ರಿಷನ್ನಿಗೆ ಬಿಡಬೇಕೆಂದು ಇದೆ. ಆದುದರಿಂದ ಈಗ ಶೇಕಡಾ 25ರಷ್ಟು ಕಾಂಟ್ರಿಬ್ಯೂಷನ್ನು ಕೊಡಬೇಕೆಂದಿರುವುದನ್ನು ಶೇಕಡಾ ಹತ್ತರಷ್ಟು ಎಂದು ಕಡಮೆ ಮಾಡುವುದಕ್ಕೆ ಸರಕಾರ ಆರ್ಡರ್ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಅಂತಹ ಆರ್ಡರಾಗಿ ಬಹಳ ದಿವಸಗಳಾಗಿವೆ.

Sri N. O. SAMAJI (Marathi).—

Sri S. R. KANTHI (Minister for Education).—Sir, Sri Samaji wants to know how many wells did not get water ? He is under the wrong impression that these are irrigation wells.

Sri N. O. SAMAJI.—No, no. The answer is incomplete; it is wrong.

Mr. SPEAKER.—Wrong answers do not mean that the Chair can do anything. If wrong answers are given, the member knows the remedy ; the Chair is not going to decide.

ಶ್ರೀ ಬಿ. ಬೈರಪ್ಪಾಜಿ.—ಹೊಸದಾಗಿ ಬಾವಿಗಳನ್ನು ಜನ ತೆಗೆದುಕೊಳ್ಳುವಾಗ ಶೇಕಡಾ ಐದರಷ್ಟು ಕಾಂಟ್ರಿಬ್ಯೂಷನ್ನು ಕೊಡಬೇಕು ಮತ್ತು ಎನ್. ಇ. ಎಸ್. ಹಾಗೂ ತಾಲ್ಲೂಕು ಬೋರ್ಡುಗಳ ಮೂಲಕ ಬಾವಿಗಳನ್ನು ಮಾಡುವಾಗ ಶೇಕಡಾ 25 ರಷ್ಟು ಮತ್ತು ಶೇಕಡಾ 50 ರಷ್ಟು ಕೊಡಬೇಕೆಂದು ನಿಗದಿಯಾಗಿದೆ. ಆದರೆ ಕೆಲವು ಕಡೆಗಳಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಜನಗಳಿರುವ ಸಂದರ್ಭಗಳಲ್ಲಿ ಈ ರೀತಿ ಕಾಂಟ್ರಿಬ್ಯೂಷನ್ನು ಕೊಡುವುದರಲ್ಲಿ ವಿನಾಯಿತಿ ಮಾಡಿಕೊಡುವುದು ಸರಕಾರದ ಕರ್ತವ್ಯವಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಇದು ಕರ್ತವ್ಯವಾಗುವುದಿಲ್ಲ. ಯಾವುದಾದರೂ ಒಂದು ಹಳ್ಳಿಯಲ್ಲಿ ತೊಂದರೆಯಾಗಿದೆ ಎಂದರೆ ಅದನ್ನು ಹೇಳಿ ಬಿಡಿಸಬಹುದು. ಸಾಮೂಹಿಕವಾಗಿ ಇದನ್ನು ಬಿಡಿಸಬೇಕೆಂದರೆ ಅದು ಸರಿಯಾಗಿರುವುದಿಲ್ಲ.

Road from Chikkundur to Yeslur.

*Q.—43. Sri S. A. VASANNA SHETTY (Sakaleshpur).—

Will the Government be pleased to state :

(*a*) the year in which the road from Chikkundur to Yeslur was sanctioned ;

(*b*) the amount spent on this road so far ;

(*c*) the action taken by them to complete the road ?

A.— Sri G. B. SHANKAR RAO (Parliamentary Secretary to the Minister for Public Works).—

(*a*) No estimate is sanctioned for forming the road fro Chikkundur to Yeslur.

(*b*) Does not arise in view of reply to clause (*a*).

(*c*) Does not arise in view of reply to clause (*a*)